ಓ.ಎಸ್. ನಂ. 32/2022 ಡಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 25.1.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಹೆಚ್.ಎಸ್ ವಕೀಲರಿಂದಃ**

ನಾನು 2 ನೇ ತರಗತಿ ಓದಿರುತ್ತೇನೆ. ನನಗೆ ಅಲ್ಪಸ್ವಲ್ಪ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ 1 ನೇ ಪ್ರತಿವಾದಿಯು ಮಾಹಿತಿ ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಚಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುತ್ತದೆ. ದಾವ 1 ಮತ್ತು 2 ನೇ ಐಟಂ ಆಸ್ತಿಗಳು ಮೂಲತಃ ಬೋಗಪ್ಪ ಮತ್ತು ಗಿಡ್ಡಮ್ಮ ನವರಿಗೆ ಸೇರಿತ್ತು. ದಾವ 3 ಮತ್ತು 4 ನೇ ಐಟಂ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು. ಸದರಿ ಬೋಗಪ್ಪ ಮತ್ತು ಗಿಡ್ಡಮ್ಮ ನನ್ನ ತಂದೆ ತಾಯಿಯಾಗಿರುತ್ತಾರೆ. ದಾವ 3 ಮತ್ತು 4 ನೇ ಐಟಂ ಆಸ್ತಿಗಳನ್ನು ನನ್ನ ಚಿಕ್ಕಪ್ಪನವರು ನನ್ನ ತಂದೆಯಿಂದ ರೂ.4,000/- ಪಡೆದುಕೊಂಡು ಬರೆದುಕೊಟ್ಟಿರುತ್ತಾರೆ ಎನ್ನುವರು. ನನ್ನ ಚಿಕ್ಕಪ್ಪ ನನ್ನ ತಂದೆಗೆ ಯಾವುದೇ ದಾಖಲೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವ 3 ಮತ್ತು 4 ನೇ ಐಟಂ ಆಸ್ತಿಗಳು ಮೊದಲು ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿದಾರರು ನನ್ನ ತಂದೆಯ ಹೆಸರಿನಲ್ಲಿದ್ದು, ಅವುಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎನ್ನುವರು. ದಾವ 4 ನೇ ಐಟಂ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಪಹಣಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆಗೆ ಸದರಿ ಆಸ್ತಿ ಬಂದಿರುವುದನ್ನು ತೋರಿಸಲು ಪಹಣಿಯನ್ನು ಹೊರತುಪಡಿಸಿ ಬೇರೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಾವ 3 ಮತ್ತು 4 ನೇ ಐಟಂ ಆಸ್ತಿಗಳು ಮೊದಲು ಬೋಗಪ್ಪ ಮತ್ತು ಗಿಡ್ಡಮ್ಮನವರ ಹೆಸರಿನಲ್ಲಿದ್ದು ಏಕಾಏಕಿ ನನ್ನ ತಂದೆಯು ವಾದಿಯ ಗಮನಕ್ಕೆ ಬರದಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಊರಿನಲ್ಲಿ ಪಂಚಾಯಿತಿ ನಡೆದು ವಾದಿಯು ರೂ.4,000/- ಪಡೆದುಕೊಂಡು 1 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎನ್ನುವರು. ವಾದಿಯು ಆ ರೀತಿ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ, ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ದಾವ 3 ಮತ್ತು 4 ನೇ ಐಟಂ ಆಸ್ತಿಯ ಖಾತೆಗಳನ್ನು ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಖಾತೆ ಬದಲಾವಣೆಯ ಸಮಯದಲ್ಲಿ ವಾದಿಯು ಬರೆದುಕೊಟ್ಟಿದ್ದಾರೆ ಎಂದು ಹೇಳುವ ದಾಖಲೆ, ವಂಶವೃಕ್ಷವನ್ನು ಕಂದಾಯ ಅಧಿಕಾರಿಗಳಿಗೆ ನನ್ನ ತಂದೆ ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಕಾನೂನು ಪ್ರಕಾರ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇವೆ ಎಂದು ಹೇಳಿದ್ದು ಹೇಗೆ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿದಾರರು ಗಿಡ್ಡಮ್ಮ

ಬದುಕಿದ್ದಾಗ ಅವರ ಅಂತ್ಯಕ್ರಿಯೆಯನ್ನು ಯಾರು ಮಾಡುತ್ತಾರೋ ಅವರಿಗೆ ಆಸ್ತಿ ಹೋಗಬೇಕೆಂದು ಬರೆದಿದ್ದರಿಂದ ನನ್ನ ತಂದೆಯು ದಾವ 3 ಮತ್ತು 4 ನೇ ಐಟಂ ಆಸ್ತಿಯ ಖಾತೆ ಮಾಡಿಸಿಕೊಂಡಿರುತ್ತಾರೆ ಎನ್ನುವರು. ಸದರಿ ಗಿಡ್ಡಮ್ಮನವರು ಬರೆದುಕೊಟ್ಟಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವ 3 ನೇ ಐಟಂ ಆಸ್ತಿಯಲ್ಲಿ 35 ಗುಂಟೆ ಜಮೀನು ಯಾವಾಗ ಭೂಸ್ವಾಧೀನವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಭೂಸ್ವಾಧೀನವಾದಾಗ ದಾವ 3 ನೇ ಐಟಂ ಆಸ್ತಿ ಗಿಡ್ಡಮ್ಮನ ಹೆಸರಿನಲ್ಲಿತ್ತು ಎಂದರೆ ಸರಿ. ದಾವ 3 ನೇ ಐಟಂ ಆಸ್ತಿ ಗಿಡ್ಡಮ್ಮನ ಹೆಸರಿನಲ್ಲಿದ್ದರೂ ಸಹ 1 ನೇ ಪ್ರತಿವಾದಿಯು ಪರಿಹಾರದ ಹಣವನ್ನು ಒಬ್ಬರೇ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ವಾದಿ ಮತ್ತು 1 ನೇ ಪ್ರತಿವಾದಿ ಇಬ್ಬರೂ ಹಂಚಿಕೊಂಡಿರುತ್ತಾರೆ ಎನ್ನುವರು. ಆ ರೀತಿ ಪರಿಹಾರದ ಹಣವನ್ನು ಹಂಚಿಕೊಂಡಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಹಣವನ್ನು ಪಡೆದುಕೊಂಡು ನನ್ನ ತಂದೆಗೆ ಯಾವುದೇ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಆಸ್ತಿಗಳು ಬೋಗಪ್ಪನಿಗೆ ಸೇರಿದ್ದು ಅವರು ತೀರಿಕೊಂಡ ನಂತರ ವಾದಿ, ಪ್ರತಿವಾದಿಯರಿಗೆ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ವಾದಿಗೆ ಬಡತನ ಇದುದ್ದರಿಂದ ಅವರು ಚಿಕ್ಕಬರಗಿ ಗ್ರಾಮಕ್ಕೆ ಹೋಗಿ ಜೀವನೋಪಾಯ ಮಾಡಿಕೊಂಡಿದ್ದರು ಎಂದರೆ ಸಾಕ್ಷಿದಾರರು ಹಣ ಪಡೆದು ಆಸ್ತಿ ನೀಡಿ ಚಿಕ್ಕಬರಗಿ ಗ್ರಾಮಕ್ಕೆ ಹೋಗಿರುತ್ತಾರೆ ಎನ್ನುವರು. ವಾದಿಯು 1 ನೇ ಪ್ರತಿವಾದಿ ಬಳಿ ಹಲವಾರು ಸಾರಿ ಆಸ್ತಿಯಲ್ಲಿ ಪಾಲು ಕೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಆಸ್ತಿಯಲ್ಲಿ ಪಾಲು ನೀಡಲು ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಊರಿನಲ್ಲಿ ಪಂಚಾಯಿತಿ ಮಾಡಿ ಊರಿನ ಮುಖಂಡರ ಮೂಲಕ ಸಹ ಭಾಗ ಕೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು 2 ನೇ ಪ್ರತಿವಾದಿಗೆ ಆಸ್ತಿಯಲ್ಲಿ ಪಾಲು ನೀಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಸಲ್ಲಿಸಿರುವ ತಕರಾರಿನ ಬಗ್ಗೆ ವೈಯಕ್ತಿಕ ಮಾಹಿತಿ ಇರದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ2 ರಿಂದ ನಿಡಿ4 ರಲ್ಲಿ ಗಿಡ್ಡಮ್ಮ (ಪಿತ್ರಾರ್ಜಿತ) ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ5 ರಲ್ಲಿ ಬೋಗಪ್ಪನ ತಾಯಿ ವೀರಮ್ಮ (ಪಿತ್ರಾರ್ಜಿತ) ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ವೀರಮ್ಮನವರು ತನ್ನ ಮಗಳಾದ ನಾಗಮ್ಮನಿಗೆ ಬರೆದುಕೊಟ್ಟಿರುತ್ತಾರೆ ಎನ್ನುವರು. ಆ ರೀತಿ ನಾಗಮ್ಮನಿಗೆ ಆಸ್ತಿ ಬರೆದುಕೊಟ್ಟಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ

ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಆರ್ 2/1997–98 ರಂತೆ ನನ್ನ ತಂದೆ ಯಾವ ರೀತಿ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ವಾದಿಯು ಹಣ ಪಡೆದುಕೊಂಡು ಬರೆದುಕೊಟ್ಟ ದಾಖಲೆಯ ಆಧಾರದ ಮೇಲೆ ಖಾತೆ ಬದಲಾವಣೆಯಾಗಿರುತ್ತದೆ ಎನ್ನುವರು. ದಾವಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಹಕ್ಕು ಇದ್ದು, ಆ ಕಾರಣ ವಾದಿ ಮತ್ತು 1 ನೇ ಪ್ರತಿವಾದಿ ನಿಡಿ16 ರಂತೆ ಬೋಗ್ಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿದರರು ಬೋಗ್ಯ ಮಾಡಿ ಬಂದ ಹಣವನ್ನು ವಾದಿಯು ಪಡೆದುಕೊಂಡಿದ್ದು ಆಸ್ತಿಯನ್ನು ಬಿಡಿಸಿಕೊಳ್ಳಲು 1 ನೇ ಪ್ರತಿವಾದಿಗೆ ಹೇಳಿರುತ್ತಾರೆ ಎನ್ನುವರು. ವಾದಿಯ ಹಕ್ಕನ್ನು ಕಬಳಿಸಲು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಆಸ್ತಿಗಳಿಗೆ ಸಂಬಂಧಪಟ್ಟಂತೆ ಈವರೆವಿಗೂ ವಿಭಾಗವಾಗಿರುವುದಿಲ್ಲ ಎಂದರೆ ಸಾಕ್ಷಿದಾರರು ದಾಖಲೆ ಬರೆದುಕೊಟ್ಟಿರುತ್ತಾರೆ ಎನ್ನುವರು. ನನ್ನ ತಂದೆ ಆಸ್ತಿಯಲ್ಲಿ ಪಾಲು ನೀಡಲು ನಿರಾಕರಿಸಿರುವುದರಿಂದ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ವಾದಿಯು ಹಣ ಪಡೆದುಕೊಂಡು ಎಲ್ಲವನ್ನು ಬಿಟ್ಟುಕೊಟ್ಟು ಹೋಗಿರುತ್ತಾರೆ ಎನ್ನುವರು. 2 ನೇ ಪ್ರತಿವಾದಿಗೆ ಅಸ್ತಿಯಲ್ಲಿ ಭಾಗ ನೀಡಿರುವ ಬಗ್ಗೆ ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿದಾರರು 2–01 ಎಕರೆ ನೀಡಲಾಗಿರುತ್ತದೆ ಎನ್ನುವರು. ನನ್ನ ತಂದೆ ನ್ಯಾಯಾಲಯಕ್ಕೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಆ ರೀತಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಕಾನೂನುಬದ್ದವಾಗಿ ಬರಬೇಕಾಗಿರುವ ಭಾಗವನ್ನು ನ್ಯಾಯಾಲಯದಲ್ಲಿ ಕೇಳಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.